ದಿನಾಂಕಃ 29-05-2024 ರಂದು ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು.

ಪಾಟೀಸವಾಲು 3 ಮತ್ತು 4 ಪ್ರತಿವಾದಿ ಪರ ವಕೀಲರಾದ ಶ್ರೀ. ಎನ್ ಎ ಆರ್ ವಕೀಲರಿಂದ

ವಾದಿಯು ಹಾಕಿರುವ ದಾವಾ ಸ್ವತ್ತಿನ ಚೆಕ್ಕುಬಂದಿ ಹೇಳಲಾಗುತ್ತದಾ ಎಂದರೆ ಗೊತ್ತಿರುವುದಿಲ್ಲ. ಚಾಂದ್ ಪಾಷ ಪಂಚಾಯ್ತಿ ಸಧಸ್ಯರು ಎಂದರೆ ಹೌದು. ವಾದಿಯ ತಾಯಿ ಅಧ್ಯಕ್ಷರಾಗಿದ್ದರು ಎಂದರೆ ಹೌದು. ಅವರೆಲ್ಲರೂ ಸೇರಿ ದಾಖಲೆಗಳನ್ನು ಸೃಷ್ಟಿಮಾಡಿಕೊಂಡು ಸುಳ್ಳು ದಾವೆ ಹಾಕಿರುತ್ತಾರೆ ಎಂದರೆ ಸರಿಯಲ್ಲ. ದಾವೆಯನ್ನು ಯಾವುದಕ್ಕಾಗಿ ಹಾಕಿರುತ್ತಾರೆ ಎಂದರೆ ದಾರಿಗೋಸ್ಕರ. ಅಲ್ಲಿ ಯಾವುದೇ ದಾರಿ ಇರುವುದಿಲ್ಲ, ದಾರಿಗಾಗಿ ಸುಳ್ಳು ದಾವೆ ಸಲ್ಲಿಸಿರುತ್ತಾರೆ ಎಂದರೆ ಸರಿಯಲ್ಲ. ನಾನು ಕೂಲಿ ಮಾಡುತ್ತೇನೆ. ಚಾಂದ್ ಪಾಷ ರವರ ಹತ್ತಿರ ನಾನು ಕೂಲಿಗಾಗಿ ಹೋಗುವುದಿಲ್ಲ ಆದರೆ ವಿಶ್ವಾಸ. ವಿಶ್ವಾಸ ಇರುವುದರಿಂದ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ. ಪ್ರತಿವಾದಿಗಳ ಅಸ್ತಿಯ ಅಳತೆಯಾಗಲೀ ದಾಖಲೆಗಳ ಬಗ್ಗೆ ನನಗೆ ಗೊತ್ತಿರುವುದಿಲ್ಲ. ಈ ದಾವೆಯಲ್ಲಿ ಏನು ತಕರಾರು ಇದೆ ಅಂತ ನನಗೆ ಗೊತ್ತಿಲ್ಲ. ದಾರಿ ಇರುವುದು ಗೊತ್ತಿರುತ್ತದೆ. ದಾರಿ ಇದೆ ಎಂಬುದಕ್ಕೆ ದಾಖಲೆ ನೋಡಿರುತ್ತೀರಾ ಎಂದರೆ ಇಲ್ಲ. ಊರಿನಲ್ಲಿ ಖಾಲಿ ಜಾಗ ಇದ್ದರೆ ಜನ ಓಡಾಡುತ್ತಿರುತ್ತಾರೆ ಎಂದರೆ ಸರಿಯಲ್ಲ. ತಕರಾರು ಜಾಗಕ್ಕೆ ಸುತ್ತ ಮುತ್ತ ನಿಮ್ಮ ಆಸ್ತಿ ಇರುವುದಿಲ್ಲ ಎಂದರೆ ಇಲ್ಲ. ಊರಿನಲ್ಲಿ ದಾರಿ ಇದ್ದರೆ ನಕಾಶೆಯಲ್ಲಿ ಇರುತ್ತದೆ ಎಂದರೆ ಅದರ ಬಗ್ಗೆ ನನಗೆ ಗೊತ್ತಿಲ್ಲ. ಊರಿನ ನಕಾಶೆಯನ್ನು ನಾನು ನೋಡಿರುವುದಿಲ್ಲ. ಪ್ರಮಾಣ ಪತ್ರದಲ್ಲಿ ದಾರಿ ಇದೆ ಅಂತ ಬರೆಸಿರುತ್ತೀರಾ ಎಂದರೆ ಗೊತ್ತಿರುವುದಿಲ್ಲ. ನೀವು ಮತ್ತು ವಾದಿ ಸೇರಿ ಪ್ರತಿವಾದಿಯ ಆಸ್ತಿಯನ್ನು ಲಪಟಾಯಿಸಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ.

ಪಾಟೀಸವಾಲು 3 ಮತ್ತು 4 ಪ್ರತಿವಾದಿ ಪರ ವಕೀಲರಾದ ಶ್ರೀ.ಬಿ ಆರ್ ಎಸ್ ವಕೀಲರಿಂದ

ಪ್ರತಿವಾದಿಗಳ ಅಸ್ತಿಯ ಅಳತೆಯಾಗಲೀ ದಾಖಲೆಗಳ ಬಗ್ಗೆ ನನಗೆ ಗೊತ್ತಿರುವುದಿಲ್ಲ. ಈ ದಾವೆಯಲ್ಲಿ ಏನು ತಕರಾರು ಇದೆ ಅಂತ ನನಗೆ ಗೊತ್ತಿಲ್ಲ. ದಾರಿ ಇರುವುದು ಗೊತ್ತಿರುತ್ತದೆ. ದಾರಿ ಇದೆ ಎಂಬುದಕ್ಕೆ ದಾಖಲೆ ನೋಡಿರುತ್ತೀರಾ ಎಂದರೆ ಇಲ್ಲ. ಊರಿನಲ್ಲಿ ಖಾಲಿ ಜಾಗ ಇದ್ದರೆ ಜನ ಓಡಾಡುತ್ತಿರುತ್ತಾರೆ ಎಂದರೆ ಸರಿಯಲ್ಲ. ತಕರಾರು ಜಾಗಕ್ಕೆ ಸುತ್ತ ಮುತ್ತ ನಿಮ್ಮ ಆಸ್ತಿ ಇರುವುದಿಲ್ಲ ಎಂದರೆ ಇಲ್ಲ. ಊರಿನಲ್ಲಿ ದಾರಿ ಇದ್ದರೆ ನಕಾಶೆಯಲ್ಲಿ ಇರುತ್ತದೆ ಎಂದರೆ ಅದರ ಬಗ್ಗೆ ನನಗೆ ಗೊತ್ತಿಲ್ಲ. ಊರಿನ ನಕಾಶೆಯನ್ನು ನಾನು ನೋಡಿರುವುದಿಲ್ಲ. ಪ್ರಮಾಣ ಪತ್ರದಲ್ಲಿ ದಾರಿ ಇದೆ ಅಂತ ಬರೆಸಿರುತ್ತೀರಾ ಎಂದರೆ ಗೊತ್ತಿರುವುದಿಲ್ಲ. ನೀವು ಮತ್ತು ವಾದಿ ಸೇರಿ ಪ್ರತಿವಾದಿಯ ಆಸ್ತಿಯನ್ನು ಲಪಟಾಯಿಸಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲಃ

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಸಾಕ್ಷಿಯ ಹೇಳಿಕೆಯನ್ನು ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸ ಇದೆ,

ಪ್ರಧಾನ ಸಿ.ನ್ಯಾ ಮತ್ತು ಜೆ.ಎಂ.ಎಫ್.ಸಿ.,
ಚಿಂತಾಮಣಿ.

ಪಿಡಬ್ಲ್ಯೂ -3 ಓ.ಎಸ್.ನಂ. 235/2019

ದಿನಾಂಕಃ 29-05-2024 ರಂದು ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು.

ಪಾಟೀಸವಾಲು 3 ಮತ್ತು 4 ಪ್ರತಿವಾದಿ ಪರ ವಕೀಲರಾದ ಶ್ರೀ. ಎನ್ ಎ ಆರ್ ವಕೀಲರಿಂದ

ವಾದಿಯು ಯಾರ ಮೇಲೆ ದಾವೆ ಹಾಕಿರುತ್ತಾರೆ ಎಂದು ಗೊತ್ತು. ವಾದಿಯರ ನಿವೇಶನ ಅಳತೆ ಮಾಡಿರುವುದಿಲ್ಲ ಆದರೆ ದಾರಿ ಇದೆ. ರಸ್ತೆ ಇರುವುದಕ್ಕೆ ದಾಖಲೆ ಇದೆಯಾ ಎಂದರೆ ನಗೆ ಗೊತ್ತಿರುವುದಿಲ್ಲ. ಅಲ್ಲಿ ಯಾವುದೇ ರಸ್ತೆ ಇರುವುದಿಲ್ಲ ಜನ ಓಡಾಡುತ್ತಿಲ್ಲ ಎಂದರೆ ಸರಿಯಲ್ಲ. ಸ್ವಾಮಿಗಳ ಅಸ್ತಿಯನ್ನು ಅಳತೆ ಮಾಡಿರುವುದಿಲ್ಲ. ದಾವಾ ಸ್ವತ್ತಿನ ಸುತ್ತ ಮುತ್ತ ನಿಮ್ಮ ಆಸ್ತಿ ಇದೆಯಾ ಎಂದರೆ ಇಲ್ಲ. ದಾವಾ ಸ್ವತ್ತಿನ ಅಕ್ಕ ಪಕ್ಕದಲ್ಲಿ ಆಸ್ತಿ ಇರುವವರು ಸುಮಾರು ಜನರು ನಿಮ್ಮ ಊರಿನಲ್ಲಿ ಇರುತ್ತಾರೆ ಎಂದರೆ ಹೌದು. ವಾದಿಯು ನನಗೆ ಚಿಕ್ಕ ವಯಸ್ಸಿನಿಂದಲೂ ಗೊತ್ತಿರುತ್ತಾರೆ. ವಾದಿಗೂ ನಿಮಗೂ ವಿಶ್ವಾಸ ಇರುವುದರಿಂದ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ. ಪ್ರತಿವಾದಿಗೆ ಸೇರಿದ ಸ್ವಂತ ಜಾಗವನ್ನು ಕಬಳಿಸಲು ಸುಳ್ಳು ಸಾಕ್ಷ್ಯ ನುಡಿಯುತ್ತೀರಿ ಎಂದರೆ ಸರಿಯಲ್ಲ. ನರಸಿಂಹಮೂರ್ತಿ ರವರ ಜಾಗವನ್ನು ಕಬಳಿಸಲು ವಾದಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ. ಸರ್ವೆ ಅಧಿಕಾರಿಯರು ಬಂದು ನರಸಿಂಹ ಮೂರ್ತಿ ರವರ ಆಸ್ತಿಯನ್ನು ಅಳತೆ ಮಾಡಿರುತ್ತಾರೆ ಎಂದರೆ ಮಾಡಿರುವುದಿಲ್ಲ. ನಿಮ್ಮ ಪ್ರಮಾಣ ಪತ್ರದಲ್ಲಿ ರಸ್ತೆ ಅಂತ ಹೇಳಿರುವ ಜಾಗ ನರಸಿಂಹಮೂರ್ತಿ ರವರ ಸ್ವಂತ ಅಸ್ತಿ ಎಂದರೆ ಇಲ್ಲ. ನರಸಿಂಹಮೂರ್ತಿ ರವರ ದಾಖಲೆಗಳನ್ನು ನಾನು ನೋಡಿಲ್ಲ, ಅವರ ಆಸ್ತಿಯ ಪೂರ್ವ ಪಶ್ಚಿಮ ಉತ್ತರ ದಕ್ಷಿಣಕ್ಕೆ ಏನು ಇದೆ ಅಂತ ನನಗೆ ಗೊತ್ತಿಲ್ಲ.

ಪಾಟೀಸವಾಲು 1 ಮತ್ತು 2 ಪ್ರತಿವಾದಿ ಪರ ವಕೀಲರಾದ ಶ್ರೀ. ಎನ್ ಎ ಆರ್ ವಕೀಲರಿಂದ

ಪ್ರತಿವಾದಿ ನಾರಾಯಣಮ್ಮ ರವರ ದಾಖಲೆ ನೋಡಿರುವುದಿಲ್ಲ. ಚೆಕ್ಕುಬಂದಿ ಗೊತ್ತಿರುತ್ತದೆ. ವಾದಿಯು ರಸ್ತೆ ಬಗ್ಗೆ ನಾರಾಯಣಮ್ಮ ಮತ್ತು ನರಸಿಂಹಮೂರ್ತಿ ರವರ

ಮೇಲೆ ಹಾಕಿರುತ್ತಾರೆ. ರಸ್ತೆ ಇರುವ ಬಗ್ಗೆ ದಾಖಲೆ ನೋಡಿರುವುದಿಲ್ಲ. ರಸ್ತೆ ಇರುತ್ತದೆ. ವಾದಿ ನಮ್ಮ ಗ್ರಾಮಸ್ಥರಾಗಿದ್ದು ವಿಶ್ವಾಸ ಇರುತ್ತದೆ. ನಾನು ಕೂಲಿ ಕೆಲಸಕ್ಕೆ ಹೋಗುತ್ತೇನೆ. ಅಲ್ಲಿ ಯಾವುದೇ ದಾರಿ ಇರುವುದಿಲ್ಲ ಯಾರೂ ಓಡಾಡುತ್ತಿಲ್ಲ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ.

ವಾದಿಯು ಯಾರ ಮೇಲೆ ದಾವೆ ಹಾಕಿರುತ್ತಾರೆ ಎಂದು ಗೊತ್ತು. ವಾದಿಯರ ನಿವೇಶನ ಅಳತೆ ಮಾಡಿರುವುದಿಲ್ಲ ಆದರೆ ದಾರಿ ಇದೆ. ರಸ್ತೆ ಇರುವುದಕ್ಕೆ ದಾಖಲೆ ಇದೆಯಾ ಎಂದರೆ ನಗೆ ಗೊತ್ತಿರುವುದಿಲ್ಲ. ಅಲ್ಲಿ ಯಾವುದೇ ರಸ್ತೆ ಇರುವುದಿಲ್ಲ ಜನ ಓಡಾಡುತ್ತಿಲ್ಲ ಎಂದರೆ ಸರಿಯಲ್ಲ. ಸ್ವಾಮಿಗಳ ಅಸ್ತಿಯನ್ನು ಅಳತೆ ಮಾಡಿರುವುದಿಲ್ಲ. ದಾವಾ ಸ್ವತ್ತಿನ ಸುತ್ತ ಮುತ್ತ ನಿಮ್ಮ ಆಸ್ತಿ ಇದೆಯಾ ಎಂದರೆ ಇಲ್ಲ. ದಾವಾ ಸ್ವತ್ತಿನ ಅಕ್ಕ ಪಕ್ಕದಲ್ಲಿ ಆಸ್ತಿ ಇರುವವರು ಸುಮಾರು ಜನರು ನಿಮ್ಮ ಊರಿನಲ್ಲಿ ಇರುತ್ತಾರೆ ಎಂದರೆ ಹೌದು. ವಾದಿಯು ನನಗೆ ಚಿಕ್ಕ ವಯಸ್ಸಿನಿಂದಲೂ ಗೊತ್ತಿರುತ್ತಾರೆ. ವಾದಿಗೂ ನಿಮಗೂ ವಿಶ್ವಾಸ ಇರುವುದರಿಂದ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ. ಪ್ರತಿವಾದಿಗೆ ಸೇರಿದ ಸ್ವಂತ ಜಾಗವನ್ನು ಕಬಳಿಸಲು ಸುಳ್ಳು ಸಾಕ್ಷ್ಯ ನುಡಿಯುತ್ತೀರಿ ಎಂದರೆ ಸರಿಯಲ್ಲ. ನರಸಿಂಹಮೂರ್ತಿ ರವರ ಜಾಗವನ್ನು ಕಬಳಿಸಲು ವಾದಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ. ಸರ್ವೆ ಅಧಿಕಾರಿಯರು ಬಂದು ನರಸಿಂಹ ಮೂರ್ತಿ ರವರ ಆಸ್ತಿಯನ್ನು ಅಳತೆ ಮಾಡಿರುತ್ತಾರೆ ಎಂದರೆ ಮಾಡಿರುವುದಿಲ್ಲ. ನಿಮ್ಮ ಪ್ರಮಾಣ ಪತ್ರದಲ್ಲಿ ರಸ್ತೆ ಅಂತ ಹೇಳಿರುವ ಜಾಗ ನರಸಿಂಹಮೂರ್ತಿ ರವರ ಸ್ವಂತ ಅಸ್ತಿ ಎಂದರೆ ಇಲ್ಲ. ನರಸಿಂಹಮೂರ್ತಿ ರವರ ದಾಖಲೆಗಳನ್ನು ನಾನು ನೋಡಿಲ್ಲ, ಅವರ ಆಸ್ತಿಯ ಪೂರ್ವ ಪಶ್ಚಿಮ ಉತ್ತರ ದಕ್ಷಿಣಕ್ಕೆ ಏನು ಇದೆ ಅಂತ ನನಗೆ ಗೊತ್ತಿಲ್ಲ.

ಮರು ವಿಚಾರಣೆ ಇಲ್ಲಃ

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಸಾಕ್ಷಿಯ ಹೇಳಿಕೆಯನ್ನು ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸ ಇದೆ,

ಪ್ರಧಾನ ಸಿ.ನ್ಯಾ ಮತ್ತು ಜೆ.ಎಂ.ಎಫ್.ಸಿ.,
ಚಿಂತಾಮಣಿ.